ಶ್ರೀ ವೇದಾಂತ ಹೆಬ್ಬಿಗೆ.—ಆರಮನೆಯನ್ನು ನೋಡುವುದಕ್ಕೆ, ನಮ್ಮ ದೇಶದಿಂದಲೂ ಹಾಗೂ ಹೊರ ದೇಶಗಳಿಂದಲೂ ಜನ ಬರುತ್ತಾರೆ. ಮೈಸೂರು ಕುಶಲ ಕೈಗಾರಿಕಾ ಸಾಮಾನುಗಳು ಬಹಳ ಪ್ರಸಿದ್ಧಿಯಾಗಿವೆ. ಆದರೆ, ಆರಮನೆ ಬಾಗಿಲಿನಲ್ಲಿ ಮಾರತಕ್ಕ ಸಾಮಾನುಗಳು ಸಾಮಾನ್ಯವಾಗಿ, ಮರಕ್ಕೆ ಸ್ವಲ್ಪ ಗಂಧದ ಎಣ್ಣೆ ಸವರಿ, ಬೋಟಾ ಸಾಮಾನು ಮಾರತಕ್ಕ ವ್ಯವಸ್ಥೆ ಇದೆ. ಆರಮನೆಯನ್ನು ನೋಡುವುದಕ್ಕೆ ಬರತಕ್ಕಂಥ ಪ್ರವಾಸಿಗರಿಗೆ, ಒಳ್ಳೆಯ ಕುಶಲ ಕೈಗಾರಿಕಾ ಸಾಮಾನುಗಳು ದೊರಕುವುದಕ್ಕೆ ಸರ್ಕಾರದ ವತಿಯಿಂದ ದೊರಕುವುದಕ್ಕೆ ವ್ಯವಸ್ಥೆ ಮಾಡಿದ್ದೀರಾ ? ಒಂದು ವೇಳೆ ಮಾಡದೇ ಹೋದರೆ ಆದಷ್ಟು ಜಾಗ್ರತೆ ಅಂತಹ ಒಂದು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಮೈಸೂರು ಕರಕುಶಲ ಕೈಗಾರಿಕಾ ನಿಗಮದ ಒಂದು ಮಳಿಗೆ ಅಲ್ಲಿದೆ ಮಾನ್ಯ ಸದಸ್ಯರು ಮತ್ತು ಇನ್ನಿತರ ಸ್ನೇಹಿತರು ಅಲ್ಲಿ ಬರತಕ್ಕಂಥ ಪ್ರವಾಸಿಗರಿಗೆ ಹೇಳಬೇಕು. ನೀವು ದಯವಿಟ್ಟು ಬೇರೆ ಸಾಮಾನುಗಳನ್ನು ಖರೀದಿ ಮಾಡಬೇಡಿ ಸರ್ಕಾರದ ಅಂಗಡಿ ಎಲ್ಲಿದೆಯೋ ಅಲ್ಲಿ ಮಾತ್ರ ಕೊಂಡುಕೊಳ್ಳಿ ಎಂದು ಹೇಳಬೇಕು.

ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳಿಗೆ ಆಸ್ತಿಯಲ್ಲಿ ಸಮಪಾಲು

೨೫ (೨೧(ಬಿ) ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ಗಂಡು ಮಕ್ಕಳು ಮತ್ತು ಹೆಣ್ಣುಮಕ್ಕಳಿಗೆ ಸಮಪಾಲನ್ನು ನೀಡಲು ಆಂಧ್ರ ಪ್ರದೇಶ ಸರ್ಕಾರದಲ್ಲಿರುವ ಮಾದರಿಯ ಒಂದು ಶಾಸನವನ್ನು ತರಬೇಕೆಂಬ ಯಾವುದೇ ಪ್ರಸ್ತಾವವು ಸರ್ಕಾರದ ಮುಂದಿದೆಯೇ ?

(ಆ) ಇರದಿದ್ದರೆ, ಮಹಿಳೆಯರ ಹಿತರಕ್ಷಣೆಗಾಗಿ ಸರ್ಕಾರವು ಈಗಲಾದರೂ ಅಂಥದೇ ಶಾಸನವನ್ನು ತರುವುದೇ ?

ಶ್ರೀ ಎ. ಲಕ್ಷ್ಮಿಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಆಹಾರ ಮತ್ತು ಮತ್ತು ನಾಗರಿಕ ಸರಬರಾಜು ಸಚಿವರು).—

(ಅ) ಹೌದು.

(ಆ) (ಎ) ಖಂಡದ ಉತ್ತರವನ್ನು ನೋಡಿದಾಗ ಈ ಪ್ರಶ್ನೆಯೇ ಉದ್ಭವಿಸುವುದಿಲ್ಲಾ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಎರಡನೆಯ ಪ್ರಶ್ನೆಗೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ. ಈ ಪ್ರಶ್ನೆಯ ಇಂಗಿತವನ್ನು ಅರಿತು ಹೇಳಿದ್ದರೆ ಹೆಚ್ಚು ನೆಟ್ಟಗಾಗುತ್ತಿತ್ತು, ತಮ್ಮ ಗಮನಕ್ಕೆ ಬಂದ ಮೇಲೂ ಈ ಕಾನೂನನ್ನು ತರುವುದಕ್ಕೆ ಏತಕ್ಕೆ ವಿಳಂಬ ಮಾಡುತ್ತಿದ್ದೀರಿ ? ಹೆಣ್ಣು ಮಕ್ಕಳಿಗೆ ಆಸ್ತಿಯಲ್ಲಿ ಸಮಪಾಲು ಬರುವಂತಹ ಉಪಯುಕ್ತವಾದ ಕಾನೂನು ತರುವುದು ಬಹಳ ಒಳ್ಳೆಯದು.

ಶ್ರೀ ಎ. ಲಕ್ಷ್ಮೀಸಾಗರ್.—ಮಾಡುತ್ತೇನೆಂದು ಉತ್ತರ ಹೇಳಿದ್ದೇನೆ ಅವರ ಮನಸ್ಸಿನಲ್ಲಿರುವುದು ಬೇಗ ಮಾಡಲಿ ಎಂದು, ಆಗಲಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಪಾಟೀಲರು ಅವರ ಆಸ್ತಿಯನ್ನು ಅವರ ಹೆಣ್ಣು ಮಕ್ಕಳಿಗೆ ಬಿಡುತ್ತಾರೋ, ಗಂಡು ಮಕ್ಕಳಿಗೆ ಬಿಡುತ್ತಾರೋ ಗೊತ್ತಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ನನಗೆ ಹೆಣ್ಣು ಮಕ್ಕಳಿಲ್ಲ, ಎಲ್ಲಾ ಹೆಣ್ಣು ಮಕ್ಕಳೂ ನನ್ನ ಅಕ್ಕ ತಂಗಿಯರು ಎಂದು ಈ ರೀತಿ ಹೇಳಿದ್ದೇನೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಾಹನಗಳಿಗೆ ಹಾರನ್‌ಗಳ ಜೋಡಣೆ.

೨೬ (೩೪೮) ಶ್ರೀ ಕೆ. ಪಂಪಸತ ಬಂಗೇರ (ಬೆಳ್ತಂಗಡಿ).—ಮಾನ್ಯ ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆಯು ಬಹುತೇಕ ಬಸ್‌ಗಳಿಗೆ ಡಬ್ಬಿ ಮಾಡುವಯಂತ್ರ ಅಳವಡಿಸದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದಲ್ಲಿ, ಈ ಕಾರಣದಿಂದ ಎಷ್ಟೋ ಅಪಘಾತಗಳು ಸಂಭವಿಸಿದ್ದಾಗ್ಯೂ ಈ ಬಗ್ಗೆ ಗಮನ ಹರಿಸದಿರಲು ಕಾರಣವೇನು ?

ಶ್ರೀ ವೀರಣ್ಣ (ಸಾರಿಗೆ ಮತ್ತು ಸಣ್ಣ ಉಳಿತಾಯ ರಾಜ್ಯ ಮಂತ್ರಿಗಳು.).—

(ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಎಲ್ಲಾ ಬಸ್‌ಗಳಿಗೂ ಬಲ್ಪ್ ಹಾರನ್ ಅನ್ನು ಅಳವಡಿಸಲಾಗಿದೆ.

(ಆ) ಹಾರನ್ ಇಲ್ಲದೆ ಅಪಘಾತ ಸಂಭವಿಸಬಹುದಾದ ಪ್ರಸಂಗಗಳು ಸಂಸ್ಥೆಯ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ವಸಂತ ಬಂಗೇರ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಸತ್ಯಕ್ಕೆ ದೂರವಾದ ಉತ್ತರ ಕೊಟ್ಟಿದ್ದಾರೆ. ಈ ವಿಚಾರವನ್ನು ಸಂಬಂಧಪಟ್ಟ ಡ್ರೈವರ್ಸ್ ಮತ್ತು ಕಂಡಕ್ಟರ್ಸ್‌ಗಳಿಂದ ತಿಳಿದು ನಾನು ಈ ಪ್ರಶ್ನೆಯನ್ನು ಹಾಕಿದ್ದೇನೆ. ಆದೂ ಅಲ್ಲದೆ ನನ್ನ ಕ್ಷೇತ್ರದಲ್ಲಿ ಅನೇಕ ಸಲ ಬಸ್ ಅಪಘಾತ ನಡೆದ ಸಂದರ್ಭದಲ್ಲಿ, ಆ ಬಸ್‌ಗಳಲ್ಲಿ ಹಾರನ್ ಇಲ್ಲ ಎಂಬ ವಿಚಾರ ತಿಳಿದು ಈ ಪ್ರಶ್ನೆ ಹಾಕಿದ್ದೇನೆ. ಆದರೂ ಕೂಡಾ ಹಾರನ್ ಅಳವಡಿಸಲಾಗಿದೆ ಎಂದು ಹೇಳಿದ್ದಾರೆ. ಆದರೆ ಆ ಹಾರನ್‌ಗಳು ಸರಿ ಉಂಟೋ ಇಲ್ಲವೋ ಎಂಬ ವಿಚಾರ ಮಾನ್ಯ ಸಚಿವರಿಗೆ ಗೊತ್ತಿರಲಿಕ್ಕಿಲ್ಲ. ನಿಮ್ಮ ಸಂಸ್ಥೆಯ ಹೆಚ್ಚಿನ ಬಸ್‌ಗಳು ಓವರ್ ಟೇಕ್ ಮಾಡುವ ಸಂದರ್ಭದಲ್ಲಿ ಹಾರನ್ ಹಾಕುವುದಿಲ್ಲ. ಗಾಡಿಯನ್ನು ಗೇರ್‌ಗೆ ಹಾಕಿ, ಕ್ಲಚ್ ಒತ್ತಿ ಹಿಡಿದು, ಎಂಜಿನ್ ಸೌಂಡ್ ಜೋರು ಮಾಡಿ, ಒಂದು ರೀತಿಯ ಕರ್ಕಶ ಶಬ್ದ ಮಾಡಿ ಓವರ್ ಟೇಕ್ ಮಾಡುತ್ತಾರೆ. ಈ ಸಂದರ್ಭದಲ್ಲಿ ಏನಾಗುತ್ತದೆ ಎಂದು ಹೇಳಿದರೆ ಮುಂದೆ ಹೋಗುತ್ತಿರುವ ವಾಹನದ ಚಾಲಕ ಗಾಬರಿ ಬಿದ್ದು ವಾಹನದ ಅಪಘಾತ ಆಗುವ ಸಂಭವ ಬರುತ್ತದೆ ಹಿಂದಿನ ವಾಹನವೂ ಸಹ ಯಾವುದಕ್ಕಾದರೂ ಗುದ್ದಿ ಅಪಘಾತಕ್ಕೆ ಈಡಾಗುವ ಸಂದರ್ಭ ಬರುತ್ತದೆ. ಈ ರೀತಿ ಅಪಘಾತ ಆಗುವ ಸಂದರ್ಭವನ್ನು ತಪ್ಪಿಸುತ್ತೀರಾ ?

ಶ್ರೀ ವೀರಣ್ಣ.—ಅಧ್ಯಕ್ಷರೇ, ಒಂದು ಬಸ್ಸನ್ನು ಅದರ ಚಾಲಕ ಒಂದು ರೂಟ್‌ಗೆ ತೆಗೆದು ಕೊಂಡು ಹೋಗುವುದಕ್ಕೆ ಮುಂಚಿತವಾಗಿ, ಆ ಡಿಪೋ ಲೆವೆಲ್‌ನಲ್ಲಿ ಸೆಕ್ಯುರಿಟಿ ಗಾರ್ಡ್ ಏನು ಇರುತ್ತಾರೆ ಆ ಸೆಕ್ಯೂರಿಟಿ ಗಾರ್ಡ್ಸ್ ಬಸ್ಸ್‌ನ್ನು ಹೊರಗಡೆ ಕೊಡ ಬೇಕಾದರೆ, ಅದರ ಬ್ರೇಕ್ ಸರಿಯಾಗಿದೆಯೇ ಇಲ್ಲವೇ, ಹಾರನ್ ಇದೆಯೇ ಇತ್ಯಾದಿ ವಿಚಾರಗಳನ್ನು ಪುಸ್ತಕದಲ್ಲಿ ನಮೂದು ಮಾಡಿ, ಎಲ್ಲಾ ಸರಿಯಾಗಿದ್ದರೆ ಆ ಬಸ್‌ನ್ನು ಹೊರಗೆ ಕೊಡುವಂತಹ ಪದ್ಧತಿ ಇರುತ್ತದೆ. ಮಧ್ಯ ದಾರಿಯಲ್ಲಿ ಹಾರನ್ ಕೆಟ್ಟು ಹೋದರೆ ಅದನ್ನು ಅಲ್ಲಿ ಸರಿ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಬೇರೆ ಡಿಪೋಗೆ ಹೋಗಿ ಸರಿಮಾಡಿಕೊಂಡು ಹೋಗಬೇಕಾಗುತ್ತದೆ. ಇಲ್ಲಿಯವರೆಗೂ ಹಾರನ್ ಇಲ್ಲದೆ ಬಸ್ ಅಪಘಾತ ಸಂಭವಿಸಿರತಕ್ಕ ಪ್ರಕರಣಗಳು ಯಾವುದೂ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಈ ಸಂದರ್ಭದಲ್ಲಿ ನಾನು ಒಂದು ವಿಚಾರವನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಬಸ್‌ಗಳಿಗೆ ಹಾರನ್ ಹಾಕಿದ ಸಂದರ್ಭದಲ್ಲೂ ಕೂಡಾ, ಎಷ್ಟೇ ಹಾರನ್ ಮಾಡಿದರೂ ಕೂಡ ಯಾರೂ ಪಕ್ಕಕ್ಕೇ ಹೋಗುವುದಿಲ್ಲ. ಎಷ್ಟು ಹಾರನ್ ಮಾಡಿದರೂ ಕೂಡಾ ಪ್ರಯೋಜನ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಹಾರನ್ ಇಲ್ಲದೆ ಎಷ್ಟು ಅಪಘಾತ ಆಗಿವೆ ಎಂಬುದು ನಮ್ಮ ಗಮನಕ್ಕೆ ಬಂದಿಲ್ಲ ಎಂದು ಮಾನ್ಯ ಸಚಿವರು ಹೇಳಿದರು. ಹಾರನ್ ಇದ್ದಾಗ್ಲೆ ಎಂದೇ ಇಟ್ಟುಕೊಳ್ಳಿ. ಹಾರನ್ ಇದ್ದರೂ ಕೂಡಾ ಸೌಂಡ್ ಆದರಿಂದ ಹೊರಗೆ ಬರದೇ ಅಪಘಾತವಾಗಿರತಕ್ಕಂಥ ಪ್ರಕರಣಗಳು ಎಷ್ಟು ನಿಮ್ಮ ಗಮನಕ್ಕೆ ಬಂದಿದೆ.

ಶ್ರೀ ವೀರಣ್ಣ.—ಹಾರನ್ ಇದ್ದರೂ ಅದರಿಂದ ಸೌಂಡ್ ಇಲ್ಲದೇ ಅಪಘಾತ ಆಗಿರತಕ್ಕಂಥ ಯಾವುದೂ ಪ್ರಸಂಗಗಳು ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಯಾವಾಗಲೂ ಡ್ರೈವರ್ಸ್ ಹಾರನ್ ಮಾಡುತ್ತಾ ಇರತಕ್ಕಂಥಾದು ಅಗತ್ಯ ಇಲ್ಲ. ಮುಂದೆ ಯಾವುದಾದರೂ ವಾಹನ ಬಂದಾಗ ಹಾರನ್ ಮಾಡತಕ್ಕಂಥಾದ್ದು ಇದ್ದೆ.

ಬೇರೆ ಯಾವ ಕೇಸ್‌ನಲ್ಲೂ ಹಾರನ್ ಮಾಡತಕ್ಕಂಥ ಪದ್ಧತಿ ಇಲ್ಲ. ನಾವು ೨೧ನೇ ಶತಮಾನಕ್ಕೆ ಹೋಗಬೇಕಾಗಿದೆಯಲ್ಲ ಆದಕ್ಕಾಗಿ ಹಾರನ್ ಎಲ್ಲಾ ತೆಗೆದುಹಾಕಬೇಕೆಂದು ನಾವು ಯೋಚನೆ ಮಾಡುತ್ತಾ ಇದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಕಾಲದಲ್ಲಿ ಬಹಳಷ್ಟು ಮುಗಿಸಿ ಆಯಿತು. ಇನ್ನು ಮೇಲೆ ಪೂರ್ತಿ ರೋಡ್ ತುಂಬಾ ಅಪಘಾತಗಳು ಆಗಲಿ ಎಂದು ಈ ರೀತಿ ಮಾಡುತ್ತೀರಾ ?

ಶ್ರೀ ಕೆ. ಪಸಂತ ಬಂಗೇರಾ.—ಹಾರನ್ ಅವಶ್ಯಕತೆಯೇ ಇಲ್ಲ ಎಂಬ ವಿಚಾರ ಬಂತು. ಕೆಲವು ಹಾರನ್ ಶಬ್ದ ಬರುತ್ತವೆ, ಶಬ್ದ ಇಲ್ಲದೇ ಇರತಕ್ಕಂಥ ಹಾರನ್ ಇದೆ. ಬೇರೆ ಬೇರೆ ರೀತಿಯ ಹಾರನ್ ಇವೆ ಎಂಬ ವಿಚಾರ ಬಂತು. ನಾನು ಶಬ್ದ ಮಾಡುವಂತಹ ಹಾರನ್ ಬಗ್ಗೆ ಹೇಳುತ್ತಿದ್ದೇನೆ. ಆದರೆ ಅದರ ಬದಲಾಗಿ ಹಾರನ್ ವಿಚಾರದಲ್ಲಿ ಅನೇಕ ವಿವಾದ ಬರುತ್ತಾ ಇದೆ. ಹಾರನ್ ಬೇಡಿ, ದೊಡ್ಡ ಘಂಟೆಯನ್ನು ಕಟ್ಟಿಬಿಡಿ. ಆ ಘಂಟೆಯ ಸದ್ದಿಗೆ ಎಲ್ಲಾ ಜನಗಳೂ ಜಾಗ ಬಿಡುತ್ತಾರೆ, ಎಲ್ಲಾ ಬಸ್‌ಗಳನ್ನೂ ಸರಿಯಾಗಿ ಚೆಕ್ ಮಾಡಿ ನಾವು ಬಿಡುತ್ತಿದ್ದೇವೆ ಎಂದು ಮಾನ್ಯ ಸಚಿವರು ಹೇಳಿದರು. ಒಂದು ಬಸ್‌ನಲ್ಲಿ ನಾನೇ ಪ್ರಯಾಣ ಮಾಡುತ್ತಿದ್ದೆ. ಅದೂ ರಾತ್ರಿ ಬಸ್. ಅದಕ್ಕೆ ಸೈಟ್ಸ್ ಟೈರೇ ಇರಲಿಲ್ಲ. ಇದು ಇವರು ಚೆಕ್ ಮಾಡಿ ಬಿಟ್ಟ ಬಸ್. ನಾವು ದಾರಿಯಲ್ಲಿ ಸಾಯುವಂತಹ ಪರಿಸ್ಥಿತಿ ಇದೆ. ರಾತ್ರಿವೇಳೆ ಹೊರಡುವ ಬಸ್‌ಗಳು ಅಲ್ಲಲ್ಲೇ ರೋಡ್‌ನಲ್ಲಿ ನಿಂತು ಜನಗಳಿಗೆ ತೊಂದರೆಯಾಗತಕ್ಕಂಥ ಪರಿಸ್ಥಿತಿ ಇದೆ.

ಶ್ರೀ ವೀರಣ್ಣ.—ಅದಕ್ಕೆ ನಾನು ಉತ್ತರ ಏನು ಹೇಳಲಿ.

ಸಂಡೂರಿನಲ್ಲಿ ನ್ಯಾಯಾಲಯವನ್ನು ಸ್ಥಾಪಿಸುವ ಬಗ್ಗೆ

೨೭(೨೬೬) ಶ್ರೀ ಯು. ಭೂಪತಿ. (ಸಂಡೂರು).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

(ಅ) ಸಂಡೂರಿನಲ್ಲಿ ನ್ಯಾಯಾಲಯದ ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದಲ್ಲಿ ಈ ನ್ಯಾಯಾಲಯದ ಸ್ಥಾಪನೆಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ಮತ್ತು ಯಾವಾಗ ನ್ಯಾಯಾಲಯ ಸ್ಥಾಪಿಸಲಾಗುವುದು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

(ಅ) ಹೌದು.

(ಆ) ಸಂಡೂರಿನಲ್ಲಿ ಮುನ್ಸೀಫ್ ನ್ಯಾಯಾಲಯ ಮತ್ತು ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್ ನ್ಯಾಯಾಲಯವನ್ನು ಸ್ಥಾಪಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಸನ್ಮಾನ್ಯ ಅಧ್ಯಕ್ಷರೇ, ಇದಕ್ಕೆ ಪೂರಕವಾಗಿ, ಹೈಕೋರ್ಟಿನವರೂ ಕೂಡಾ ಇಲ್ಲಿ ನ್ಯಾಯಾಲಯದ ಅವಶ್ಯಕತೆ ಇದೆ ಎಂದು ಹೇಳಿ ತಮ್ಮ ಪಂಜೂರಾತಿಯನ್ನು ಮತ್ತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮುಂದಿನ ಕ್ರಮ ಆರ್ಥಿಕ ಇಲಾಖೆಯಲ್ಲಿ ಇದೆ. ಅವರಿಂದ ಕ್ಲಿಯರ್ ಆಗ ತಕ್ಕಂಥ ಸನ್ನಿವೇಶವನ್ನು ನಾನುಗಮನಿಸಿದ್ದೇನೆ. ಈ ಬಗ್ಗೆ ನಾನು ಆಶಾದಾಯಕವಾಗಿ ಇದ್ದೇನೆ, ಬೇಗ ಮಾಡಿಸುವುದಕ್ಕೆ ಏರ್ಪಾಡು ಮಾಡುತ್ತೇನೆ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಆಶಾದಾಯಕವಾದ ಉತ್ತರ ಹೇಳಿದ್ದಾರೆ.